ಯಲ್ಲಿ ಎಂಟೂವರೆ ಸಾವಿರ ಪ್ರೈಮರಿ ಸ್ಕೂಲುಗಳಿದ್ದವು, ಈ ವರ್ಷ ಹತ್ತುವರೆ ಸಾವಿರ ಇವೆ; ಎರಡು ಸಾವಿರ ಹೆಚ್ಚಿವೆ.

ಶ್ರೀ ಬಿ. ಹುಚ್ಚೇಗೌಡರು.—ಈ ಸಾಲಲ್ಲಿ ಎಷ್ಟು ಕೊಡಬೇಕೆಂದು ಮಾಡಿದ್ದೀರಿ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಡ್ಜೆಟ್ ನಿಮ್ಮ ಮುಂದಿದೆ, ನೋಡಿ ತಿಳಿದುಕೊಳ್ಳಬಹುದು.

ಶ್ರೀ ಬಿ. ಹುಚ್ಚೇಗೌಡರು.—ಮುಂದಿನ ವರ್ಷ ಎಷ್ಟು ಕೊಡುತ್ತೀರಿ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎರಡು ಲಕ್ಷ ರೂಪಾಯಿ ಒದಗಿಸಿದೆ; ಆದರಲ್ಲಿ ಎಷ್ಟಾಗುತ್ತದೆಯೋ ಅಷ್ಟನ್ನು ಕೊಡುತ್ತೇವೆ.

The Hon'ble Sri H. C. DASAPPA.—That again is taking the form of a regular debate. He should ask a question and get an answer. No arguing about the policy.

ಶ್ರೀ ಬಿ. ಹುಚ್ಚೇಗೌಡರು.—I am not discussing the policy. ಹಾಗಾದರೆ ಈ ಕೆಲಸ ಎಷ್ಟು ವರ್ಷಕ್ಕೆ ಮುಗಿದರೆ ಅಷ್ಟಕ್ಕೆ ಮುಗಿಯಬೇಕೆಂದು ಮಾಡಿದ್ದೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಷ್ಟೇ ಕಾಲದಲ್ಲಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಜನಸಂಖ್ಯೆ ಮಾಲ್ತೂಸಿಯನ್ ಸಿದ್ಧಾಂತದ ಪ್ರಕಾರ ವರ್ಷವರ್ಷಕ್ಕೆ ಒಂದಕ್ಕೆ ಎರಡರಷ್ಟು, ಎರಡಕ್ಕೆ ನಾಲ್ಕರಷ್ಟು, ನಾಲ್ಕಕ್ಕೆ ಎಂಟರಷ್ಟರಂತೆ ಜಾಸ್ತಿಯಾಗುತ್ತಿದೆ!

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹತ್ತು ವರ್ಷಕ್ಕೆ ಪೂರೈಸಬೇಕೆಂದು ಒಂದು ಯೋಜನೆ ಇಟ್ಟುಕೊಂಡಿದ್ದೇವೆ. ಈಗ ಜನಸಂಖ್ಯೆ ಹೆಚ್ಚಿರುವ ದಾಪಾಷಾ ನೋಡಿದರೆ ಸ್ವಲ್ಪ ಜಾಸ್ತಿ ತರಬೇಕಾಗಬಹುದು.

ಶ್ರೀ ಬಿ. ಹುಚ್ಚೇಗೌಡರು.—ಪ್ಲಾನ್ ಎಂದು ಹೇಳಿದ್ದೀರಲ್ಲಾ, ಆ ಪ್ಲಾನ್ ಯಾವುದು?

Mr. SPEAKER.—They have given the information. The Hon'ble Member in evidently not satisfied with it and is desirous of discussing it during the question time. He may do so on some other occasion.

ಶ್ರೀ ಬಿ. ಹುಚ್ಚೇಗೌಡರು.—ಪ್ಲಾನ್ ಎಂದು ಹೇಳಿದರಲ್ಲಾ ಅದು ಯಾವುದು ಎಂಬುದನ್ನು ಹೇಳಲಿಲ್ಲ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆಗಲೇ ಹೇಳಿದೆನಲ್ಲಾ! ವಯಸ್ಕರ ವಿದ್ಯಾಭ್ಯಾಸ ಕೌನ್ಸಿಲ್ಲಿನವರು ಒಂದು ಪ್ಲಾನ್ ಮಾಡಿಕೊಂಡಿದ್ದಾರೆ. ಇದಕ್ಕೆ ಮೈಸೂರು ಸರ್ಕಾರದವರು 5 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ, ಇಂಡಿಯಾ ಸರ್ಕಾರದವರೂ 5 ವರ್ಷಗಳಲ್ಲಿ ವರ್ಷ ಒಂದಕ್ಕೆ 8 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದಿದ್ದಾರೆ. ಇಷ್ಟು ಹಣವನ್ನೂ ಉಪಯೋಗಿಸಿ ವಿದ್ಯಾಭ್ಯಾಸ ಕೊಡಬೇಕೆಂದು ಒಂದು ಪ್ಲಾನ್ ಹಾಕಿಕೊಂಡಿದ್ದಾರೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು (ಮೈಸೂರು ಜಿಲ್ಲೆ).—$2\frac{3}{4}$ ಲಕ್ಷ ಜನರನ್ನು ಈ ಹತ್ತು ವರ್ಷಗಳಲ್ಲಿ ಆಕ್ಷರಸ್ಥರನ್ನಾಗಿ ಮಾಡಿದ್ದೇವೆಂದು ಹೇಳಿದ್ದೀರಿ. ಇದಕ್ಕೆ ಎಷ್ಟು ಖರ್ಚಾಗಿದೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನೋಟೀಸ್ ಬೇಕು.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—28·6 ಲಕ್ಷ ಜನರನ್ನು ವಿದ್ಯಾವಂತರನ್ನಾಗಿ ಮಾಡುವುದಕ್ಕೆ ಹತ್ತು ವರ್ಷ ಬೇಕೆಂದು ಹೇಳಿ ಒಂದು ಪ್ಲಾನ್ ಮಾಡಿಕೊಂಡಿದ್ದೇವೆಂದು ಹೇಳಿದ್ದೀರಿ. ಇದಕ್ಕೆ ಎಷ್ಟು ಖರ್ಚಾಗುತ್ತದೆಂದು ಕೌನ್ಸಿಲನವರು ಹೇಳಿದ್ದಾರೆಯೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದನ್ನೆಲ್ಲಾ ಮಾಡಿದೆ. ಅಂಕಿ ಅಂಶಗಳನ್ನು ಈಗ ಹೇಳುವುದಕ್ಕಾಗುವುದಿಲ್ಲ.

Mr. SPEAKER.—Short Notice Question. Sri Govinda Reddy.

Rehabilitation and re-employment of displaced military personnel of the integrated Mysore State Forces.

ಪ್ರಶ್ನೆ 5.—ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಡಿಸ್ಟ್ರಿಕ್ಟ್—ಸಾರ್ವತ್ರಿಕ ಚುನಾವಣೆ ಸ್ಥಾನ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರ ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ :—

(a) ಭಾರತ ಸೈನ್ಯದೊಡನೆ ಸೇರಿಸಲಾದ ಮೈಸೂರು ಸಂಸ್ಥಾನದ ಸೈನ್ಯಪಡೆಗಳಲ್ಲಿದ್ದ ಹುದ್ದೆಗಳಿಂದ ನಿವೃತ್ತಿಗೊಳಿಸಲ್ಪಟ್ಟ 'ಮಿಲಿಟರಿ' ನೌಕರರುಗಳ ವಿಷಯವಾಗಿ ಸರ್ಕಾರದವರು ಇದೇ ತಿಂಗಳು 23 ನೆಯ ತಾರೀಖಿನಿಂದೀಚೆಗೆ, ಇಂಡಿಯಾ ಸರ್ಕಾರದ "ಸ್ಪೆಷಲ್ ಮಿನಿಸ್ಟ್ರಿ"ಯ ಸೆಕ್ರೆಟರಿಯವರಾದ ಮಿ॥ ವಿ. ಪಿ. ಮೆನನ್‌ರವರೊಡನೆ ಮಾತುಕತೆ ನಡೆಯಿಸಿರುತ್ತಾರೆಯೆ;

(b) ನಡೆಯಿಸಿದ್ದಲ್ಲಿ ಅಂಥ ನೌಕರರ ವಿಚಾರವನ್ನು ಪುನರ್ವ್ಯವಸ್ಥೆಗೊಳಿಸುವ ವಿಷಯವನ್ನೂ, ಅವರಿಗೆ ಬೇರೆ ನೌಕರಿಗಳನ್ನು ಕೊಡಿಸಿಕೊಡುವ ವಿಷಯವನ್ನೂ ಚರ್ಚಿಸಲಾಯಿತೆ;

(c) ಯಾವುದಾದರೂ ತೀರ್ಮಾನಗಳನ್ನು ಮಾಡಲಾಯಿತೆ;

(d) ಆ ನೌಕರರುಗಳ ವಿಚಾರವನ್ನು ಪುನರ್ವ್ಯವಸ್ಥೆಗೊಳಿಸುವ ವಿಷಯದಲ್ಲೂ ಮತ್ತು ಹೆಚ್ಚಳಗಳ ವಿಚಾರದಲ್ಲೂ ಮೈಸೂರು ಸರ್ಕಾರದವರು ಈ ಹಿಂದೆಯೇ ರೂಪಿಸಿದ್ದ ಸಲಹೆಗಳನ್ನು ಆ ಮಾತುಕತೆಗಳ ಸಂದರ್ಭದಲ್ಲಿ ಚರ್ಚಿಸಲಾಯಿತೆ?

ಉತ್ತರ.—ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—

(a) ಹೌದು; ನಡೆಯಿಸಿರುತ್ತಾರೆ, ಇದೇ ಮಾರ್ಚಿ 24ನೆಯ ಮತ್ತು 25ನೆಯ ತಾರೀಖುಗಳಲ್ಲಿ

(b) ಹೌದು; ಚರ್ಚಿಸಲಾಯಿತು

(c) ಹೌದು; ಮಾಡಲಾಯಿತು

(d) ಹೌದು; ಚರ್ಚಿಸಲಾಯಿತು

ಶ್ರೀ ಎಂ. ಗೋವಿಂದರೆಡ್ಡಿಯವರು.—ಶ್ರೀ ವಿ. ಪಿ. ಮೆನನ್‌ರವರೊಡನೆ ಮೈಸೂರು ಸರ್ಕಾರದ ಪರವಾಗಿ ಮಾತುಕತೆ ನಡೆಸಿದವರು ಯಾರ್ಯಾರು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಾನ್ಯ ಹಣಕಾಸಿನ ಸಚಿವರು, ಮಾನ್ಯ ಒಳಾಡಳಿತ ಸಚಿವರು ಮತ್ತು ಚೀಫ್ ಸೆಕ್ರೆಟರಿಯವರು.

ಶ್ರೀ ಎಂ. ಗೋವಿಂದರೆಡ್ಡಿಯವರು.—ಮೈಸೂರು ದೇಶದ ಪಡೆಗಳನ್ನು ವಿಸರ್ಜನೆ ಮಾಡುವುದಕ್ಕೆ ಏನು ಕಾರಣ ಅವರು ಕೊಟ್ಟರು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಗಲೇ ಹೇಳಿದ್ದೇನೆ. ಇಂಟೆಗ್ರೇಷನ್ ಆದಮೇಲೆ, ಹೀಗೆ ವಿಸರ್ಜನೆ ಮಾಡುವುದಕ್ಕೆ ಮುಖ್ಯ ಕಾರಣ ಇಂಡಿಯಾ ಸೈನ್ಯದಳ ದಲ್ಲಿ general ಆಗಿ demobilisation ಮಾಡುತ್ತಿರುವುದೇ ಆಗಿದೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಇದರ ವಿಚಾರದಲ್ಲಿ ಇಂಟೆಗ್ರೇಷನ್ ಆದಾಗ ಯಾವಯಾವ ಷರತ್ತುಗಳನ್ನು ಹಾಕಿತ್ತೆಂಬದನ್ನು ಅವರ ಗಮನಕ್ಕೆ ತಂದಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಂದಲ್ಲ, ಎರಡಲ್ಲ, ನಾಲ್ಕೈದುಸಾರಿ ತಂದಿದ್ದೇವೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಆ ಷರತ್ತುಗಳನ್ನು ಅವರು ಅನುಸರಿಸಿಲ್ಲವೆಂಬ ಅಂಶವನ್ನು ಅವರ ಗಮನಕ್ಕೆ ತಂದಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಂದಿದ್ದೇವೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಏಕೆ ಅನುಸರಿಸಿಲ್ಲ ಎಂದು ಹೇಳಿದರೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಭಾರತ ಸೈನ್ಯದಲ್ಲಿ ಈಗ ಅನುಸರಿಸಲಾಗುತ್ತಿರುವ general demobilisation ಪ್ಲಾನ್ ಪ್ರಕಾರ ಹೀಗಾಯಿತೆಂದು ಹೇಳಿದರು.

ಶ್ರೀ ಎಂ. ಗೋವಿಂದರೆಡ್ಡಿಯವರು.—ಆ ಷರತ್ತುಗಳನ್ನು ಅನುಸರಿಸದಿರುವುದರಿಂದ ಅವರಿಗೆ ಏನೇನು ಕಷ್ಟ ನಷ್ಟಗಳಾಗಿವೆಯೆಂಬದನ್ನು ವಿವರಿಸಿ ಹೇಳಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನೆಲ್ಲಾ ವಿವರವಾಗಿ ಹೇಳಲಾಗಿದೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಅದಕ್ಕೆ ಉತ್ತರ ಏನು ಹೇಳಿದರು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೀಗೆ alternative ಕೆಲಸಗಳನ್ನು ಕೊಡುವುದಕ್ಕೆ ಸಿದ್ಧವಾಗಿದ್ದೇವೆಂದು ಹೇಳಿ, ಯಾರ್ಯಾರು ಯಾವಯಾವ ಕೆಲಸಕ್ಕೆ ಹೋಗಲು ಅಭಿರುಚಿಯುಳ್ಳವರಾಗಿದ್ದಾರೆಂಬದನ್ನು ವಿಚಾರಿಸಿ ತಿಳಿಸಬೇಕೆಂದು ಸೂಚಿಸಿ, ಎಲ್ಲರಿಗೂ ಸರಿಯಾದ ರೀತಿಯಲ್ಲಿ re-habilitate ಮಾಡುವುದಕ್ಕೆ ಒಪ್ಪಿದ್ದಾರೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಅವರು ಈ ರೀತಿ ವಿಸರ್ಜನೆಯಾಗದೆ ಇದ್ದಿದ್ದರೆ ಮುಂದೆ ಅವರು ಎಲ್ಲಿಯವರೆಗೆ ಯಾವ ಸ್ಥಾನಕ್ಕೆ ಹೋಗುತ್ತಿದ್ದರೆಂಬದನ್ನು ತಿಳಿಸಿ, ಈಗ ಅದನ್ನು ಕಳೆದುಕೊಂಡಿದ್ದರಿಂದ ಅದಕ್ಕೂ ಸೂಕ್ತ ಪರಿಹಾರ ಕೊಡಬೇಕೆಂದು ಕೇಳೋಣವಾಯಿತೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದರಿಂದ ಯಾರ್ಯಾರಿಗೆ ಯಾವ್ಯಾವ ರೀತಿ ತೊಂದರೆಯಾಗಿದೆಯೆಂಬದನ್ನು ವಿಶದವಾಗಿ ತಿಳಿಸಿ ಅವರಿಗೆಲ್ಲಾ ಸರಿಯಾಗಿ re-habilitate ಮಾಡಬೇಕು, ಇಲ್ಲದಿದ್ದರೆ ಅವರಿಗೆ ಕೊಡಬೇಕಾಗುವ ಖರ್ಚು ವಹಿಸಿಕೊಳ್ಳಬೇಕೆಂದು ಹೇಳಿದ್ದೇವೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಇಂಡಿಯಾ ಸರ್ಕಾರದವರು ಈಗ ಆರಿಸಿಕೊಂಡಿರುವ ಕೆಲವರಿಗೂ ಇಂಡಿಯಾ ಸರ್ಕಾರದಲ್ಲಿ ಯಾವ ಸ್ಥಾನಮಾನಗಳಿವೆಯೋ ಅದೇ ಸ್ಥಾನಮಾನಗಳನ್ನು ಕೊಡಬೇಕೆಂಬುದು ಷರತ್ತಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಿಷ್ಪವಾಗಿ ಆ ವಿಷಯ ಹೇಳಿದ್ದೇವೆ. In grades not less advantageous than the posts they were holding ನಲ್ಲಿರಬೇಕೆಂದು ಹೇಳಿದ್ದೇವೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಅವರನ್ನಾದರೂ ಮುಂದೆ ಕಾಪಾಡಿಕೊಂಡು ಬರುತ್ತಾರೆಯೇ ? ಅದರ ವಿಷಯದಲ್ಲಿ ಅವರೇನು ಭರವಸೆ ಕೊಟ್ಟರು.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಾಧ್ಯವಾದ ಮಟ್ಟಿಗೂ ನೆರವೇರಿಸುತ್ತೇವೆಂದು ಒಪ್ಪಿಕೊಂಡಿದ್ದಾರೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಈ ವಿಸರ್ಜಿಸಿದ ನೌಕರರಿಗೆ ಸೈನ್ಯದ ನಿಬಂಧನೆಗಳ ಪ್ರಕಾರ ಇಂಡಿಯಾ ಸರ್ಕಾರದವರು ಕೊಡಬೇಕಾದ concession ಗಳನ್ನು ಕೊಟ್ಟಿಲ್ಲವೆಂದು ಅವರ ಗಮನಕ್ಕೆ ತರಲಾಯಿತೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಮ್ಮ ಪ್ರಶ್ನೆ ನಿರ್ದಿಷ್ಟವಾಗಿಲ್ಲ. ನಿರ್ದಿಷ್ಟವಾಗಿ ಕೇಳಿದರೆ ಹೇಳಬಹುದು.

ಶ್ರೀ ಎಂ. ಗೋವಿಂದರೆಡ್ಡಿಯವರು.—ಸಾಮಾನ್ಯವಾಗಿ ಹೇಳುವುದಾದರೆ, ಮೈಸೂರು ಸರ್ಕಾರದಲ್ಲೇ ಅವರಿದ್ದರೆ ರಿಜ್ಯೆರ್ ಆದಾಗ ಯಾವ ದಾಮಾಷಾ ಪೆಕ್ಷಿಷ್ ಬರುತ್ತಿತ್ತೋ ಅದಕ್ಕೂ ಇಂಡಿಯಾ ಸರ್ಕಾರದವರಿಗೆ ಬರುವ ಪೆಕ್ಷಿಷ್‌ಗೂ ವ್ಯತ್ಯಾಸವಿದೆ. ಮೈಸೂರು ಸರ್ಕಾರದ ರೂಲ್ಸ್ ಪ್ರಕಾರ ಕಡಿಮೆ ಪೆಕ್ಷಿಷ್ ಬರುತ್ತದೆ. ಈಗ ಅವರು ಇಂಡಿಯಾ ಸರ್ಕಾರಕ್ಕೆ ಸೇರಿರುವುದರಿಂದ ಅವರಿಗೆ ಇಂಡಿಯಾ ಸರ್ಕಾರದವರ ಪೆಕ್ಷಿಷ್ ರೂಲ್ಸ್ ಪ್ರಕಾರವೇ ಕೊಡಬೇಕಾಗುತ್ತೆ. ಅದರಂತೆ ಅವರು ಕೊಡುತ್ತೇವೆಂದು ಹೇಳಿದರೇ ? ಇಲ್ಲದಿದ್ದರೆ, ಅವರೇನು ಸಮಾಧಾನ ಕೊಟ್ಟರು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನೂ ಅವರ ಗಮನಕ್ಕೆ ತಂದಿದ್ದೇವೆ. ಪೂರ್ತಿಯಾಗಿ ಇಂಡಿಯಾ ಗೌರ್ನಮೆಂಟ್ ಸರ್ವಿಸ್ಸಿನಲ್ಲಿರುವವರಿಗೆ ಕೇಂದ್ರ ಸರ್ಕಾರದವರ ರೂಲ್ಸ್‌ಗಳನ್ನು ಅನ್ವಯಿಸುತ್ತೇವೆಂದು ಹೇಳಿದ್ದಾರೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಹಾಗಾದರೆ ಕೇಂದ್ರ ಸರ್ಕಾರದವರ ರೂಲ್ಸ್ ಪ್ರಕಾರ ಪೆಕ್ಷಿಷ್ ಕೊಟ್ಟಿದ್ದಾರೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಂಟೆಗ್ರೇಟ್ ಆಗಿರುವವರಲ್ಲ ಯಾರ್ಯಾರಿಗೆ permanent commissions ಸಿಕ್ಕಿವೆಯೋ ಅವರಿಗೆ ಕೇಂದ್ರ ಸರ್ಕಾರದ ನಿಯಮಗಳನ್ನು ಅನುಸರಿಸುತ್ತೇವೆಂದು ಹೇಳಿದ್ದಾರೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಅವರು re-employment ಮತ್ತು re-habilitation ವಿಚಾರದಲ್ಲಿ ಯಾವಯಾವ ಭರವಸೆಗಳನ್ನು ಕೊಟ್ಟರು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಾಧ್ಯವಾದಷ್ಟುಮಟ್ಟಿಗೆ ಅವರಿಗೆ alternative employment ಕೊಡುತ್ತೇವೆಂದು ಹೇಳಿದ್ದಾರೆ. ಇದಲ್ಲದೆ ಪ್ರಾಂತ ಸರ್ಕಾರಗಳಲ್ಲಿ ಪೋಲೀಸ್, ಲೇಬರ್, industries, Aircraft, ಟೆಲಿಫೋನ್ ಇಂಡಸ್ಟ್ರೀಸ್—ಮುಂತಾದ ಇರಾಖೆಗಳಲ್ಲಿ ಅವರವರ ಶಕ್ತ್ಯಾನುಸಾರ ನೇಮಿಸಿಕೊಳ್ಳಬೇಕೆಂದು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಹೈದರಾಬಾದ್ ಸರ್ಕಾರದವರಿಗೂ ತಿಳಿಸಿದುದರ ಮೇರೆ ಅವರಾಗಲೇ 300—400 ಜನರನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ನಾಳೆ ಏಪ್ರಿಲ್ ಮೂರನೆಯ ತಾರೀಖು ಇಲ್ಲಿ ಗೊಬ್ಬರನ್ನು ಕಳುಹಿಸಿಕೊಡುವವರಾಗಿದ್ದಾರೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಅವರಿಗೆ alternative employment ಕೊಡುವುದರಲ್ಲಿ ಇದೇ ಸಂಬಳ ಕೊಡುತ್ತಾರೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು —Not less advantageous ಆಗಿರಬೇಕೆಂದು ಹೇಳಿದ್ದೇವೆ. ಅವರೂ ಸಾಧ್ಯವಾದಷ್ಟುಮಟ್ಟಿಗೆ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಈ alternative employment ಕೊಡುವುದರಲ್ಲೂ ಕೂಡ 3—4 ತಿಂಗಳು ಹಂಗಾಮಿಯಾದ ಕೆಲಸಗಳನ್ನು ಕೊಟ್ಟು ಬಹುಕಾಲ ಇಟ್ಟುಕೊಳ್ಳದೆ ಕಳುಹಿಸಕೂಡದೆಂದು ಹೇಳಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಖಚಿತವಾಗಿ ಹೇಳಿದ್ದೇವೆ. ನುಮ್ಮನೆ 3—4 ತಿಂಗಳ ಕೆಲಸಗಳಿಗೆ ಅವರು ತೆಗೆದುಕೊಳ್ಳಕೂಡದೆಂದು ತಿಳಿಸಿದ್ದೇವೆ. ಅವರೂ ಒಪ್ಪಿದ್ದಾರೆ. ಅವರೂ ನಮ್ಮ ಜನರಲ್ಲಿ ಬಹಳ ಅಭಿಮಾನ ತೋರಿಸಿದ್ದಾರೆಂದು ನಾನು ಹೇಳಬೇಕು. In fact they showed equal concern over the future of these officers.

ಶ್ರೀ ಎಂ. ಗೋವಿಂದರೆಡ್ಡಿಯವರು.—Alternative employment ಎಂದರೆ ಮೈಸೂರು ಸರ್ಕಾರದ ಕೆಲಸವೇ ಅಥವಾ ಇಂಡಿಯಾ ಸರ್ಕಾರದವರ ಕೆಲಸವೇ ಎಂಬದರ ವಿಚಾರದಲ್ಲಿ ಖಚಿತವಾದ ತೀರ್ಮಾನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರೇನೋ ಖಚಿತವಾಗಿ ಇಂಡಿಯಾ ಸರ್ಕಾರದಲ್ಲಿ ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲಿ ಒದಗಿಸುತ್ತೇವೆಂದು ಹೇಳಿದ್ದಾರೆ. ಆದರೆ ಇವರುಗಳೆಲ್ಲರೂ ಮೈಸೂರು ದೇಶವನ್ನು ಬಿಟ್ಟು ಹೋಗುವುದಕ್ಕೆ ತಯಾರಾಗಿಲ್ಲವೆಂದು ಗೊತ್ತಾಯಿತು. ಅದರ ಮೇಲೆ ಸಾಧ್ಯವಾದರೆ ಇಲ್ಲಿಯೂ ಖಾಲಿ ಬಿದ್ದ ಸ್ಥಾನಗಳನ್ನು ಅವರಿಗೆ ಕೊಡಬೇಕೆಂದು ಹೇಳಿದ್ದೇವೆ

ಶ್ರೀ ಎಂ. ಗೋವಿಂದರೆಡ್ಡಿಯವರು.—Alternative Employment ಎಂದರೆ ಯಾವ ಯಾವ ಗ್ರೇಡಿನಲ್ಲಿ ಕೊಡುತ್ತೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಮಗೇ ಗೊತ್ತಿರುವಂತೆ ಹೋದ ತಿಂಗಳು 24-25ರಲ್ಲಿ ಈ ಮಾತುಕತೆಗಳು ನಡೆದಿವೆ. ಈ ಏಪ್ರಿಲ್ 10ರಲ್ಲಿ ಇಲ್ಲಿಂದ ರಿಪೋರ್ಟ್ ಕಳುಹಿಸಿಕೊಡಬೇಕೆಂದು ಹೇಳಿದ್ದಾರೆ. ಇದಕ್ಕಾಗಿಯೇ ಒಂದು Departmental Committee ಮಾಡಿದೆ. ಅವರು ಇತ್ಯರ್ಥಮಾಡಿದ ಮೇಲೆ ಎಲ್ಲಾ ತೀರ್ಮಾನಮಾಡಲಾಗುತ್ತದೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಮೈಸೂರು ಸರ್ಕಾರದವರನ್ನು Re-habilitate ಮಾಡತಕ್ಕ ವಿಚಾರದಲ್ಲಿ ತಾವೇನು ಮಾಡಬೇಕೆಂದು ತಿಳಿಸಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರು ಕೇಳಿರುವ ತಪಶೀಲು ಬಂದ ಮೇಲೆ ತಿಳಿಸುತ್ತೇವೆಂದು ಹೇಳಿದ್ದಾರೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಎಷ್ಟು ಹಣ ಕೊಡುತ್ತೇವೆಂದು ಹೇಳಿದ್ದಾರೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪ್ಲಾನ್ ನೋಡಿ ಹೇಳುತ್ತಾರೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ತಾವು ಒಂದು ಪ್ಲಾನ್ ಹಾಕಿ ಇಷ್ಟು ಹಣ ಬೇಕಾಗುತ್ತದೆಂದು ಹೇಳಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Rough ಆದ ಒಂದು ಯೋಜನೆಯ ಪ್ರಕಾರ 80 ಲಕ್ಷ ರೂಪಾಯಿಗಳು ಬೇಕೆಂದು ಕೇಳಿದ್ದೆವು. ಅದಕ್ಕೆ ಅವರು ಅದು ಹೆಚ್ಚು ಎಂದು ತಿಳಿಸಿ ಪ್ರತಿಯೊಬ್ಬರ calling, trade, profession, fitness ಮುಂತಾದುವನ್ನೆಲ್ಲಾ ನೋಡಿಕೊಂಡು ಒಂದು ಯೋಜನೆ ಕಳುಹಿಸಿಕೊಡಿ ಎಂದು ಕೇಳಿದ್ದಾರೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಇದ್ದಕ್ಕಿದ್ದ ಹಾಗೆ ಹೀಗೆ ಬರ್ತಫ್ರ್ಮಾಡಿರುವುದರಿಂದ ಎಷ್ಟೋ ಸಾವಿರ ಜನ ಅವರೀಗ ವಾಸಮಾಡುತ್ತಿರುವ ಮನೆಗಳನ್ನು ಬಿಟ್ಟು ಹೊರಗೆ ಹೋಗಬೇಕಾಗಿ ಬರುತ್ತದೆಂಬ ಅಂಶವನ್ನು ಅವರ ಗಮನಕ್ಕೆ ತಂದು ಅವರಿಗೆ ಬೇರೆ ಕೆಲಸಗಳು ಸಿಕ್ಕುವವರೆಗೆ ಅವರನ್ನು ಆ ಮನೆಗಳಲ್ಲೇ ಉಳಿಸಿಕೊಳ್ಳಬೇಕೆಂದು ಹೇಳಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ವಿಚಾರದಲ್ಲಿ ಕೇಂದ್ರಸರ್ಕಾರದವರನ್ನೂ ಕೇಳಿದ್ದೇವೆ, ಮತ್ತು ಶ್ರೀ ವಿ. ಪಿ. ಮೆನನ್‌ರವರಿಗೂ ತಿಳಿಸಿದ್ದೇವೆ. ಈಗಲೇ ಅವರನ್ನು ಮನೆಬಿಟ್ಟು ಕಳುಹಿಸಿಕೊಡಕೂಡದು, ಬೇರೆ ಯಾವುದಾದರೂ ಕೆಲಸವನ್ನು ದೊರಕಿಸಿಕೊಟ್ಟಮೇಲೆ ಕಳುಹಿಸಬೇಕೆಂದು ಹೇಳಿದ್ದೇವೆ.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಮೈಸೂರಿನ ಮಿಲಿಟರಿಯನ್ನು ಇಂಡಿಯಾ ದೇಶದ ಮಿಲಿಟರಿಗೆ ಸೇರಿಸಿದಾಗ ಇಲ್ಲಿ ಆಗತಕ್ಕ ಖರ್ಚನ್ನೂ ಗಮನಕ್ಕೆ ತೆಗೆದುಕೊಂಡು ಫೈನಾನ್ಷಿಯರ್ ಇಂಟೆಗ್ರೇಷನ್ ಸ್ಕೀಮಿನಲ್ಲಿ ಅಷ್ಟನ್ನೂ ಬಿಟ್ಟುಕೊಟ್ಟಿದ್ದೀರಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು.

ಶ್ರೀ ಎ. ಭೀಮಪ್ಪನಾಯಕರು.—ಇದು ಹೆಚ್ಚು ಕಡಿಮೆ 80 ಲಕ್ಷ ರೂಪಾಯಿಗಳವರೆಗೂ ಆಗುತ್ತದೆಯಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಿರ್ದಿಷ್ಟವಾದ ಮೊಬಲಗನ್ನು ಈಗ ಹೇಳಲಾರೆ. ಅಂತೂ ಬಿಟ್ಟುಕೊಟ್ಟಿದ್ದೇವೆ.

ಶ್ರೀ ಎ. ಭೀಮಪ್ಪನಾಯಕರು.—ಖಾಯಮ್ಮಾಗಿ ಇಷ್ಟು ಹಣ ನಮಗೆ ಖೋತಾ ಆಗಿದೆಯಲ್ಲವೇ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಂದೊಂದು ಬಾಬಿನ ವಿಚಾರವನ್ನೂ ಹೇಳುವುದಕ್ಕಾಗುವುದಿಲ್ಲ. ಒಟ್ಟಿನಲ್ಲಿ ನಮ್ಮ ಕೆಲವು ಉತ್ಪತ್ತಿ ಬಾಬುಗಳನ್ನೂ ಮತ್ತು ಖರ್ಚುಗಳನ್ನೂ ಕೇಂದ್ರದವರು ವಹಿಸಿಕೊಂಡು 345 ಲಕ್ಷ ರೂಪಾಯಿಗಳನ್ನು ನಷ್ಟ ಭರ್ತಿಗಾಗಿ ಕೊಟ್ಟಿದ್ದಾರೆ.

ಶ್ರೀ ಎ. ಭೀಮಪ್ಪನಾಯಕರು.—ಮೈಸೂರು ಮಿಲಿಟರಿಯನ್ನು ಇಂಡಿಯಾ ಸರ್ಕಾರದ ಮಿಲಿಟರಿಗೆ ಕೊಡತಕ್ಕ ಕಾಲದಲ್ಲಿ, ನಮ್ಮ ಮೈಸೂರು ಸರ್ಕಾರದವರು, ಈ ಮಿಲಿಟರಿಯವರ ಖರ್ಚುವೆಚ್ಚಗಳ ಬಗ್ಗೆ ಕೇಂದ್ರದವರಿಗೆ ಎಷ್ಟು ಹಣವನ್ನು ಕೊಡುತ್ತೇವೆಂದು ತಿಳಿಸಿದ್ದರು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೆಚ್ಚುಕಡಿಮೆ 80 ಲಕ್ಷ ಆಗುತ್ತದೆ. They have lifted the expenditure.

ಶ್ರೀ ಎ. ಭೀಮಪ್ಪನಾಯಕರು.—ಈ ಸಹಾಯದ ಬಗ್ಗೆ ಅವರು ಖಾಯಂ ಆಗಿ ಎಷ್ಟು ಕೊಡುತ್ತಾರೆ ಅಥವಾ ಈಗ ನಮಗೆ ಖೋತಾ ಬೀಳತಕ್ಕಷ್ಟು ಮೊಬಲಗನ್ನು ಮಾತ್ರ ಕೊಡುತ್ತಾರೋ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರು ಈ ಬಗ್ಗೆ 345 ಲಕ್ಷ ಒದಗಿಸಬೇಕೆಂದು ಗೊತ್ತಾಗಿದೆ.

ಶ್ರೀ ಎ. ಭೀಮಪ್ಪನಾಯಕರು.—ಖಾಯಂ ಆಗಿ ಖೋತಾ ಆಗಿರತಕ್ಕ ಮೊಬಲಗಿನ ಬಗ್ಗೆ ಈಗ ಒಂದೇ ಸಾರಿಗೆ ಅವರು 80 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೋ ಅಥವಾ ಮುಂದೆ ಇದನ್ನು make-up ಮಾಡುವವರೆಗೂ ಖಾಯಂ ಆಗಿ ಕೊಡುತ್ತಾರೋ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ 80 ಲಕ್ಷ ರೂಪಾಯಿಗಳನ್ನು ತಾವು ಅದಕ್ಕೆ ಗಂಟುಹಾಕಬೇಕಾಗಿಲ್ಲ. ಈ establishment expenditure ಗೆ ಎಷ್ಟು ಮತ್ತು rehabilitation expenditure ಗೆ ಎಷ್ಟು ಎಂಬತಕ್ಕದ್ದನ್ನೂ ಸರಿಯಾಗಿ ಇತ್ಯರ್ಥಮಾಡಿಲ್ಲ. ಪುನಃ ತಾವು ಒಂದು ಯೋಜನೆಯನ್ನು ಕಳುಹಿಸಿಕೊಡಿ, ಯಾವ ಯಾರು ಭೂಮಿ ಇತ್ಯಾದಿಗಳನ್ನು ಕೇಳುತ್ತಾರೋ ಅವರ ವಿಚಾರವನ್ನೂ ತಿಳಿಸಿ, ಎಂದು ಕೇಳಿದ್ದಾರೆ. ಆದರೆ ಕೆಲವರು ಈ ಜಮೀನುಗಳ ಮೇಲೆ ನಿಲ್ಲಲು ಅನುಮಾನಪಡುತ್ತಿದ್ದಾರೆ. ತಪಶೀಲುವಾರ್ ಯಾವುದು ಎಷ್ಟೆಷ್ಟೆಂಬುದು ನಧ್ಯದಲ್ಲೇ ನಿರ್ಧಾರವಾಗುತ್ತದೆ.

ಶ್ರೀ ಎ. ಭೀಮಪ್ಪನಾಯಕರು.—ಖಾಯಂ ಆಗಿ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವವರೆಗೆ, ಅವರ ಜೀವನದ ಬಗ್ಗೆ ಅವರಿಗಾಗತಕ್ಕ ಖರ್ಚುವೆಚ್ಚುಗಳನ್ನು ಕೊಡಬೇಕೆಂದು ಕೇಂದ್ರದವರನ್ನು ತಾವು ಕೇಳಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರು rehabilitation ಆಗುವತನಕ, ಆಗತಕ್ಕ ಖರ್ಚನ್ನು ಕೊಡಬೇಕೆಂದು ನಾವು ಕೇಳಿದ್ದೇವೆ. ಆದರೆ ಆ ಮೊಬಲಗು ಎಷ್ಟೆಂಬುದನ್ನು ಇನ್ನೂ ನಿರ್ದಿಷ್ಟವಾಗಿ ತೀರ್ಮಾನಮಾಡಿಲ್ಲ.

ಶ್ರೀ ಎ. ಭೀಮಪ್ಪನಾಯಕರು.—ಹೀಗೆ ಇವರನ್ನು ತೆಗೆಯದೆ ಇದ್ದಿದ್ದರೆ, ಆಗ ಅವರು ಇಷ್ಟು ಜನಗಳಿಗೆ ಕೊಡಬೇಕಾಗಿದ್ದ recurring & non-recurring expenditure ಗಳಿಗೆಲ್ಲ ಇವರು ಜವಾಬ್ದಾರರಾಗುತ್ತಿರಲಿಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರು ಒಂದು ತೀರ್ಮಾನಕ್ಕೆ ಬಾರದ ಮುನ್ನ ಯಾವುದನ್ನೂ ಹೇಳುವುದಕ್ಕಾಗುವುದಿಲ್ಲ. It all depends upon the scheme. We tried and most likely they may even bear the recurring expenditure.

Sri A. BHEEMAPPA NAIK:—Have the Government of India admitted that they have not fulfilled the conditions under which the Army was transferred to the Government of India ?

The Hon'ble Sri T. MARIAPPA.—There is no question of either admission or denial; it is a question of mutual adjustment. In fact under the agreement they were entitled to be absorbed or alternative employment given. Their argument is that our Army has been integrated in the Indian Army and as Indian Army personnel in the general plan of demobilisation they were demobilised. Nevertheless the Government of India have agreed to finance the rehabilitation proposal.

Sri A. BHEEMAPPA NAIK.—Have they discriminated from State to State ?

Mr. SPEAKER.—That question has been discussed enough.

The Hon'ble Sri T. MARIAPPA.—They definitely state that they have not discriminated. On the other hand they say that Mysore has been treated favourably.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಭಾರತ ಸರ್ಕಾರದವರು ಮೈಸೂರು ನರ್ಕಾರದವರೊಡನೆ ಒಂದು ಒಪ್ಪಂದವನ್ನು ಮಾಡಿಕೊಂಡಿದ್ದು ಈಗ ಅದಕ್ಕೆ ವಿರೋಧವಾಗಿ ಭಾರತ ಸರ್ಕಾರದವರು ವರ್ತಿಸಿರುವ ಬಗ್ಗೆ ಅವರು ತಮ್ಮ ಒಪ್ಪಿಗೆಯನ್ನು ತೆಗೆದುಕೊಂಡಿದ್ದರೆ ?

ಅಧ್ಯಕ್ಷರು.—ವಿರೋಧವಾಗಿ ವರ್ತಿಸುವುದಕ್ಕೆ ಅನುಮತಿ ಪ್ರಶ್ನೆ ಎಲ್ಲಿ ಏಳುತ್ತದೆ ? ಹಾಗೆ ಒಪ್ಪಿಗೆ ತೆಗೆದುಕೊಂಡಿಲ್ಲವೆಂಬ ದಾಗಿ ಆಗಲೆ ಮಾನ್ಯ ಮಂತ್ರಿಗಳು ಉತ್ತರ ತಿಳಿಸಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—It is open for the Hon'ble Minister to say that. ಹಾಗೆ ಭಾರತ ಸರ್ಕಾರದವರು ಮೊದಲು ಈ ಸೈನಿಕರನ್ನೆಲ್ಲಾ ನಾವು ಇರಿಸಿಕೊಳ್ಳುತ್ತೇವೆಂದು ಹೇಳಿ, ಈ ದಿವಸ ಅವರನ್ನು ಮನೆಗೆ ಕಳುಹಿಸಿರುವುದು ಅವರು ಮಾಡಿಕೊಂಡಿದ್ದ ಒಪ್ಪಂದಕ್ಕೆ ವಿರೋಧವಾಗಿಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದಕ್ಕೆ ಆಗಲೇ ಉತ್ತರ ತಿಳಿಸಿದ್ದೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹಾಗೆ ಅವರನ್ನು ಮನೆಗೆ ಕಳುಹಿಸುವಾಗ ತಮ್ಮ ಒಪ್ಪಿಗೆಯನ್ನು ತೆಗೆದುಕೊಂಡು ಮನೆಗೆ ಕಳುಹಿಸಿಕೊಟ್ಟರೋ ?

The Hon'ble Sri T. MARIAPPA.—I have already stated that under the general demobilisation plan these persons have been demobilised as Indian Army personnel. As soon as we came to know that they have been demobilised we took up the question. In fact the House is aware that the question was discussed at great length and the discussion has helped us.

Sri H. M. CHANNABASAPPA.—Were the Government of Mysore consulted when the Government of India gave notice to the military personnel ?

ಅಧ್ಯಕ್ಷರು.—ಈಗ ಸಭೆಯ ಮುಂದೆ ಬಂದಿರತಕ್ಕ ಪ್ರಶ್ನೆ ಮಿ॥ ಪಿ. ಪಿ. ಮೆನನ್‌ರವರು ಬಂದಮೇಲೆ, ಅವರಿಗೂ, ಇವರಿಗೂ ನಡೆದಿರತಕ್ಕ ಮಾತುಕತೆಗಳೇನು ? ಮತ್ತು ಏನು ಒಪ್ಪಂದವಾಯಿತು ಎಂಬುದು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಈ ಮಿಲಿಟರಿಯವರ ಭವಿಷ್ಯ ಭಾರತ ಸರ್ಕಾರ ಮತ್ತು ಮೈಸೂರು ಸರ್ಕಾರಗಳ ಪರಸ್ಪರ ಒಪ್ಪಂದದ ಮೇಲೆ ನಿಂತಿದೆಯೋ ; ಅಥವಾ ಕೇವಲ ಭಾರತ ಸರ್ಕಾರದ ಕೃಪಾದೃಷ್ಟಿಯ ಮೇಲೆ ನಿಂತಿದೆಯೋ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗಿನ ಕಾರ್ಪಸ್ಟಿಟ್ಯೂಷ್ಷ ಪ್ರಕಾರ, ಪ್ರತಿಯೊಂದು ಸ್ಟೇಟಿನ ಮಿಲಿಟೆರಿಯೂ ಕೇಂದ್ರ ಸರ್ಕಾರದವರ ವಶದಲ್ಲಿರಬೇಕೆಂದಿರುತ್ತೆ. ಏಲೀನೀಕರಣವಾಗುವ ಕಾಲದಲ್ಲಿ ಪ್ರಾಂತೀಯ ಸರ್ಕಾರಗಳವರನ್ನು ಈ ಬಗ್ಗೆ ಕೇಳಿದ್ದಾಗ ಅವರೆಲ್ಲರೂ ಆಗಬಹುದೆಂದು ಒಪ್ಪಿಕೊಂಡಿದ್ದಾರೆ.

Sri H. M. CHANNABASAPPA.—The answer is different from my question. I want to know whether it is in accordance with the agreement that has been arrived at or is likely to be arrived at between the Government of Mysore and the Government of India, the future of the military personnel depends ?

The Hon'ble Sri T. MARIAPPA.—The future of the Army personnel is entirely in the hands of the Government of India.

Sri H. M. CHANNABASAPPA.—Shall I take it that the Government of Mysore have no responsibilities on that score ?

The Hon'ble Sri T. MARIAPPA.—After integration we have got moral responsibility and we have no legal responsbility.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಈಗ ತಾವು ತಿಳಿಸಿದಪ್ರಕಾರ ಅವರು ಜಮೀನು ಕೊಡುವುದು ಬೇಡ, ಏನೂಬೇಡ, ಹಣದ ರೂಪವಾಗಿ ಏನಾದರು ಪರಿಹಾರ ಕೊಡುತ್ತಾರೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ಪ್ರಶ್ನೆಯನ್ನು ಈಗ ಅವರ ಮುಂದೆ ಇಟ್ಟಿದ್ದೇವೆ.

Sri Kadidal MANJAPPA (Shimoga District—General).—I want to know whether, just prior to demobilisation, they were guided by Mysore Rules or Indian Army Rules ?

The Hon'ble Sri T. MARIAPPA.—They have got their own rules of demobilisation. I have already answered that in connection with the nature of mustering out concessions.

Sri Kadidal MANJAPPA.—I wanted to know whether just prior to demobilisation of these people, they were guided by the Mysore Rules or the Indian Army Rules ?

The Hon'ble Sri T. MARIAPPA.—May I very respectfully draw attention that that question does not arise out of the main question ?

Janab SYED ABDUR RAHMAN (Chikmagalur—*cum*—Shimoga—Muslim).—Have this Government any information as to whether any member of the Indian Parliament raised a question regarding this on the floor of the Parliament ?

Mr. SPEAKER —That does not arise.

Janab SYED ABDUR RAHMAN.—Did any member of the Indian Parliment representing Mysore raise a question on the floor of the Parliament regarding this question ? The Hon'ble Minister was pleased to say that the Government have moral obligation to see that the grievances of the Army personnel are redressed. Is there not legal obligation in view of the agreement that has been reached with the Centre ?

The Hon'ble Sri T. MARIAPPA.—That is purely a matter for interpretation and opinion.

ಶ್ರೀ ವಿ. ಎಸ್. ನಾರಾಯಣರಾಯರು (ಬೆಂಗಳೂರು ನಗರ).—ತಾವು (ಸಿ) ಪ್ರಶ್ನೆಗೆ ಉತ್ತರವಾಗಿ 'ಹೌದು' ಎಂದು ಹೇಳಿದ್ದೀರಿ. ಆದರೆ ಏನು ತೀರ್ಮಾನವಾಯಿತೆಂಬುದನ್ನು ಮಾತ್ರ ತಿಳಿಸಲಿಲ್ಲವಲ್ಲಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಂದು ಸಮಿತಿಯನ್ನು ನೇಮಕಮಾಡಬೇಕೆಂದು ತೀರ್ಮಾನವಾಗಿದೆ. ಆ ಸಮಿತಿಯಲ್ಲಿ ಈಗಾಗಲೇ ಶ್ರೀವಾರ್ಷಗೋವಿಂದ ರೆಡ್ಡಿಯವರು ತಿಳಿಸಿದಂಥ ಕೆಲವುಮಿಲಿಟೆರಿ ಅಧಿಕಾರಿಗಳನ್ನು ಇಡಬೇಕೆಂದು, ಡಿವಾಬಿಲೈಸ್ಡ್ ಸೈನಿಕರು ಮತ್ತು ಆಫೀಸರುಗಳು ಯಾವ ಯಾವ ಅನುಕೂಲತೆಗಳು ಬೇಕೆಂದು ತಿಳಿಸುತ್ತಾರೊ, ಎಂದರೆ ಕೆಲವರು ವ್ಯಾಪಾರ, ಕೆಲವರು ಜಮೀನು, ಇತ್ಯಾದಿ, ವಿಚಾರಗಳನ್ನೆಲ್ಲಾ ಅಲ್ಲಿ ನಿರ್ಧರಿಸುವಂತೆ ಮಾನ್ಯ 'ಲಾ' ಸಚಿವರ ಅಧ್ಯಕ್ಷತೆಯಲ್ಲಿ ಆಸಮಿತಿಯನ್ನು ನೇಮಕಮಾಡಿ ಇದನ್ನೆಲ್ಲಾ ತೀರ್ಮಾನ ಮಾಡಬೇಕೆಂದು tentative ಆಗಿ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಇದನ್ನು ಎಪ್ರಿಲ್ ಒಂದನೇ ತಾರೀಖಿನಿಂದ ಏರ್ಪಡಿಸಲಾಗಿದೆ.

ಶ್ರೀ ವಿ ಎಸ್. ನಾರಾಯಣರಾಯರು.—ಈ ಸೈನಿಕರ ಪೈಕಿ ಕೆಲವರು ನಮ್ಮ ಮೈಸೂರು ಜೀವವಿಮೆ ಶಾಖೆಯಲ್ಲಿ ವಿಮೆಮಾಡಿದ್ದು, ಈಗ ಆ ಬಗ್ಗೆ ಪಾವತಿಯಾಗಬೇಕಾಗಿವ್ದ ಕಂತುಗಳೆಲ್ಲ ನಿಂತುಹೋಗಿವೆ. ಅವರಿಗೆ ಮುಂದುವರಿಸಲು ಸಾಧ್ಯವಿಲ್ಲ. ಆದ ಕಾರಣ ಅವುಗಳನ್ನು paid-up policy ಯನ್ನಾಗಿ ಮಾಡಿ ಬೇಗ ಅನುಕೂಲಪಡಿಸುತ್ತೀರಾ !

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ವಿಚಾರ ಸಹ ಈಗ ನಮ್ಮ ಮುಂದೆ ಪರಿಶೀಲನೆ ಆಗುತ್ತಿದೆ. ಅಂಥಾತೊಂದರೆಗಳಿಗೆ ಅವಕಾಶವಿಲ್ಲದಂತೆ ಸರಿಪಡಿಸಲಾಗುತ್ತದೆ.

Mr. SPEAKER.—Question-time is over.